ಇ) ಬಂದಿದ್ದರೆ 2005–06ನೇ ಸಾಲಿನ ಗುರಿಯನ್ನು ಕೂಡಲೇ ನೀಡಲಾಗುವುದೆ?

ಶ್ರೀ ಅಂಜನಮೂರ್ತಿ (ಮಾನ್ಯ ವಸತಿ ಸಚಿವರು)

ಅ) ಹೌದು.

ಆ) ಹೌದು.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

354 (4729); ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ); ಉನ್ನತ ಶಿಕ್ಷಣ ಸಚಿವರು; ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಶಿವಮೊಗ್ಗದ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಆಡಳಿತದಲ್ಲಿರುವ ಶಿವಮೊಗ್ಗದ ಕಮಲಾ ನೆಹರು ಸ್ಮಾರಕ ಅನುದಾನಿತ ಮಹಿಳಾ ಕಾಲೇಜಿನಲ್ಲಿ ಸಮಾಜಶಾಸ್ತ್ರ ವಿಭಾಗದಲ್ಲಿ ಮಂಜೂರಾದ ಉಪನ್ಯಾಸಕರ ಹುದ್ದೆ ಎಷ್ಟು;

ಆ) ಈ ವಿಭಾಗದಲ್ಲಿ ಪ್ರಸ್ತುತ ಎಷ್ಟು ಜನ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ; ಇವರುಗಳ ಹೆಸರು ಮತ್ತು ನೇಮಕಾತಿ ಹೊಂದಿದ ಪ್ರವರ್ಗ, ಸೇವೆಗೆ ಸೇರಿದ ದಿನಾಂಕ ಬೇರೆ ಆಡಳಿತ ಮಂಡಳಿಯಿಂದ ವರ್ಗಾವಣೆ ಹೊಂದಿದ್ದರೆ, ವರ್ಗಾವಣೆ ದಿನಾಂಕ ಇತ್ಯಾದಿ ವಿವರ ನೀಡುವುದು;

ಇ) ಸಮಾಜಶಾಸ್ತ್ರ ವಿಭಾಗದಲ್ಲಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಆಡಳಿತದಲ್ಲಿರುವ ವಿವಿಧ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರ ಸಂಖ್ಯೆ ಎಷ್ಟು;

ಈ) ಉಪನ್ಯಾಸಕರ ಹೆಸರು, ಕಾಲೇಜು, ಕರ್ತವ್ಯ ನಿರ್ವಹಿಸುತ್ತಿರುವ ಸಮಯ / ಅವಧಿಯ ವಿವರ ನೀಡುವುದು?

ಉನ್ನತ ಶಿಕ್ಷಣ ಸಚಿವರು

ಅ) 03

ಆ) ಪ್ರಸ್ತುತ 3 ಜನ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದು, ಇವರುಗಳ ಸೇವಾ ವಿವರ ಕೆಳಕಂಡಂತಿದೆ.

ಕ್ರ ಸಂ.	ಉಪನ್ಯಾಸಕರ ಹೆಸರು	ಪ್ರವರ್ಗ	ಸೇವೆಗೆ ಸೇರಿದ / ವರ್ಗಾವಣೆಯಾದ ದಿನಾಂಕ	ಷರಾ
1.	ಮಂಜುನಾಥ ಗೌಡ	3ಎ	26.7.83	–
2.	ಉಮೇಶ್	3ಬಿ	7.2.04	ಸದರಿಯವರನ್ನು

				ದಿ: 16.7.2003ರ ಸರ್ಕಾರಿ ಪತ್ರ ಸಂಖ್ಯೆ:ಇಡಿ 9 ಯುಪಿಸಿ 2003ರ ಅನ್ವಯ ಚಿತ್ರದುರ್ಗದ ಮಹಾರಾಜ ಮದಕರಿ ನಾಯಕ ಪ್ರಥಮ ದರ್ಜೆ ಕಾಲೇಜಿನಿಂದ ಶಿವಮೊಗ್ಗದ ಕಮಲಾ ನೆಹರು ಸ್ಮಾರಕ ಮಹಿಳಾ ಕಾಲೇಜಿಗೆ ವರ್ಗಾವಣೆ ಮಾಡಲಾಗಿದೆ.
3.	ಟಿ.ಹೆಚ್.ನರೇಂದ್ರ ನಾಯಕ್	ಎಸ್.ಸಿ.	30.3.05	ಸದರಿಯವರನ್ನು ದಿ: 5.3.2005ರ ಸರ್ಕಾರಿ ಪತ್ರ ಸಂಖ್ಯೆ:ಇಡಿ 305 ಯುಪಿಸಿ 2004ರ ಅನ್ವಯ ದಾವಣಗೆರೆಯ ಎ.ಆರ್.ಜಿ. ಕಾಲೇಜಿನಿಂದ ಶಿವಮೊಗ್ಗದ ಕಮಲಾ ನೆಹರು ಸ್ಮಾರಕ ಮಹಿಳಾ ಕಾಲೇಜಿಗೆ ವರ್ಗಾವಣೆ ಮಾಡಲಾಗಿದೆ.

ಇ) 01

ಈ) ಶ್ರೀ ಬಿ.ಪ್ರಕಾಶ್‌ರವರು ಸಮಾಜಶಾಸ್ತ್ರ ಅರೆಕಾಲಿಕ ಉಪನ್ಯಾಸಕರಾಗಿ ಶರಾವತಿ ಪ್ರಥಮ ದರ್ಜೆ ಕಾಲೇಜು, ಕೋಣಂದೂರು ಇಲ್ಲಿ 1993–94 ಹಾಗೂ 94–95ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಪ್ರವರ್ಗ–2(ಎ)ಗೆ ಸೇರಿರುತ್ತಾರೆ.

355(4690); ಶ್ರೀ ಪಾಪರೆಡ್ಡಿ.ಎ.(ರಾಯಚೂರ್); ಶ್ರೀ ಅಂಜನಮೂರ್ತಿ; ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ರಾಯಚೂರಿನಲ್ಲಿ ಹೌಸಿಂಗ್ ಬೋರ್ಡ್ ನಿಂದ ನಿರ್ಮಿಸಲಾದ ಮನೆಗಳ ಸಂಖ್ಯೆ ಎಷ್ಟು ಅವುಗಳನ್ನು ಎಲ್ಲೆಲ್ಲಿ ನಿರ್ಮಿಸಲಾಗಿದೆ;

ಆ) ಅವುಗಳಲ್ಲಿ ಇದುವರೆಗೂ ಎಷ್ಟು ಮನೆಗಳನ್ನು ಹಂಚಲಾಗಿದೆ; ಎಷ್ಟು ಮನೆ ಖಾಲಿ ಇವೆ;

ಇ) ಖಾಲಿ ಇರುವ ಮನೆಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಅಂಜನಮೂರ್ತಿ

ಅ) ಕರ್ನಾಟಕ ಗೃಹ ಮಂಡಳಿ ವತಿಯಿಂದ ರಾಯಚೂರು ನಗರದಲ್ಲಿ ವಿವಿಧ ವರ್ಗಗಳಲ್ಲಿ ಒಟ್ಟು 1611 ಮನೆಗಳನ್ನು ನಿರ್ಮಿಸಲಾಗಿದೆ. ಬಡಾವಣೆಗಳ ವಿವರ ಕೆಳಗಿನಂತಿದೆ.

1. ನಿಜಲಿಂಗಪ್ಪ ನಗರ	714
2. ಜವಹಾರ್ ನಗರ	129
3. ಪೋತಗಲ್ ಬಡಾವಣೆ	721
4. ಅಸ್ಕಿಹಾಳ	47
ಒಟ್ಟು	1611

ಆ) ರಾಯಚೂರಿನಲ್ಲಿ ವಿವಿಧ ಬಡಾವಣೆಗಳಲ್ಲಿ ನಿರ್ಮಿಸಲಾದ ಒಟ್ಟು 1611 ಮನೆಗಳಲ್ಲಿ 1383 ಮನೆಗಳನ್ನು ಹಂಚಿಕೆ ಮಾಡಲಾಗಿದೆ. ಹಂಚಿಕೆಯಾಗದೆ 228 ಮನೆಗಳು ಉಳಿದಿರುತ್ತವೆ.

ಇ) ಕಡಿಮೆ ಬೇಡಿಕೆಯಿಂದಾಗಿ ಮನೆಗಳು ಖಾಲಿ ಉಳಿದಿರುತ್ತವೆ. ಈ ಮನೆಗಳನ್ನು ವ್ಯಾಪಕ ಪ್ರಚಾರ, ಸಾರ್ವಜನಿಕರಿಗೆ ಸಾಲ ಸೌಲಭ್ಯಕ್ಕಾಗಿ ಸಾಲ ಮೇಳಗಳನ್ನು ಆಯೋಜಿಸುವ ಮೂಲಕ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.